॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XVIII, No. 4 | July 2010 | Pages 12 | **Rs. 2/-**





| ಈ ಸಂಚಿಕೆಯಲ್ಲಿ | ಪುಟ | ಈ ಸಂಚಿಕೆಯಲ್ಲಿ | ಪುಟ |
|---|---|---|---|
| **Editorial** | 2 | ಗರತಿ ಜನಪದದ ಮೂಲ ಸೆರೆ – ಸುಮಾ ದ್ವಾರಕಾನಾಥ್ | 7 |
| **President's Message** | 3 | **Hindu Rituals and Routines Why do we Follow Them?** | 8 |
| ಶ್ರದ್ಧಾಂಜಲಿ | 4 | **Yatra to Dehu -** Smt. Jayashri Bhagwat | 9 |
| ಚಿಂತನ ಚಿಲುಮೆ – ಪ್ರೊ। ಪಿ. ಎಂ. ಹೆಗಡೆ | 5 | ಸುದ್ದಿ ಸಂಚಯ | 10 |
| ಭಾಸ ಬೋಧ – ಪ್ರೊ। ವಿಷ್ಣು ಜೋಶಿ, ಕುಮಟಾ | 5 | **Essay From A Child -** From Internet, contributed by R. N. Kameshwar | 12 |
| ಗೆಳೆತನ – ಶಶಿಕಲಾ ಹೆಗಡೆ | 6 | | |


*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Hon. Joint Editor*** : G. V. Bhagwat

***Editorial Committee*** { Vishwanath Dodmane, R. M. Shastri, Sathishkumar K.C.

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

***President*** : N. R. Hegde, Dombivli
***Vice - President*** : Shivkumar P. Bhagwat
***Hon. Gen. Secretary*** : Narayan Akadas
***Hon. Jt. Secretary*** : R. M. Shastri, Dombivli
***Hon. Treasurer*** : A. G. Bhat

***Elected Members :***

Smt. Tanuja Hegde
D. P. Karki
Smt. Shashikala Hegde
R. N. Kameshwar
A. K. Bhat
Smt. Uma Swamy
Ganesh Shanbag
Sanjay Bhat
Sathishkumar K.C.

***Co-opted Members :***

G. V. Bhagwat
Balchandra Markande
Prakash Hegde
Smt. Vimala Bhat

***ಸಂಪಾದಕೀಯ***

# ಕಾಣದ ಕೈ

'ಬದುಕು ಜಟಕಾ ಬಂಡಿ ವಿಧಿ ಅದರ ಸವಾರ' ಎಂದು ಬಲ್ಲವರು ಹೇಳಿದ್ದಾರೆ. ನಾವು ಕೇಳಿದ್ದೇವೆ. ಆದರೆ ಈ ಮಾತು ನಮ್ಮ ಬದುಕಿನ ಜಟಕಾ ಬಂಡಿ ಸಾಗುತ್ತಿದ್ದಂತೆ, ಮನಸ್ಸಿನ ಯಾವದೋ ಮೂಲೆಯಲ್ಲಿ ಸೇರಿ ಮರೆತುಹೋಗುತ್ತದೆ.

ಆದರೆ ಕೆಲವೊಂದು ಸನ್ನಿವೇಶಗಳಲ್ಲಿ ಮೇಲಿನ ಮಾತುಗಳ ಸತ್ಯಾಸತ್ಯತೆಯ ಅರ್ಥವಾಗುತ್ತದೆ. ಜೀವನದಲ್ಲಿ ನಮ್ಮ ಮಿತಿಯ ಅರಿವಾಗುತ್ತದೆ. ಕಾಣದ ಕೈ ನಮ್ಮನ್ನು ಕುಣಿಸುತ್ತಿರುವದು ವೇದ್ಯವಾಗುತ್ತಿದೆ.

2004-2007ರ ನಡುವೆ ಇದೇ ಅಂಕಣದಲ್ಲಿ ತಮ್ಮ ಸಂಪಾದಕೀಯದಿಂದ ನಮ್ಮವರ ಮನ ತಟ್ಟಿದ, ತಮ್ಮ ವಸ್ತುನಿಷ್ಠ ಬರೆಹಗಳಿಂದ, ವಿಚಾರ ಧಾರೆಯಿಂದ ಜನರನ್ನು ಪ್ರಭಾವಗೊಳಿಸಿದ, 'ಹವ್ಯಕ ವೆಲ್ಫೇರ್ ಟ್ರಸ್ಟ್'ಗೆ ನಿಸ್ಪೃಹತೆಯಿಂದ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ ಡಾ. ರಘುವೀರ ಭಟ್ ಇನ್ನಿಲ್ಲ. ಒಪ್ಪಿಕೊಳ್ಳಲು ಮನಸ್ಸು ಹಿಂದೇಟು ಹಾಕಿದರೂ ಇದು ವಾಸ್ತವಿಕತೆ, ನಾವು ಒಪ್ಪಿಕೊಳ್ಳಲೇಬೇಕಾದ ಕಹಿಸತ್ಯ.

ಅವರಿಗೆ ಜೀವನದಲ್ಲಿ ಇನ್ನೂ ಸಾಧಿಸುವದಿತ್ತು. ಸಾಹಿತ್ಯ ಲೋಕಕ್ಕೆ ಸುತ್ತಮುತ್ತಲಿನ ಸಮಾಜಕ್ಕೆ ಅವರು ಇನ್ನೂ ಬೇಕಾದವರಾಗಿದ್ದರು. ಆದರೆ ವಿಧಿಲಿಖಿತವನ್ನು ಬಲ್ಲವರಾರು?

ಆ ಭಗವಂತನ ಇಚ್ಛೆಯಿಲ್ಲದಿದ್ದರೆ ಒಂದು ಹುಲ್ಲುಕಡ್ಡಿಯೂ ಅಲುಗಾಡದು ಎನ್ನುತ್ತಾರೆ. ಮನದಲ್ಲಿ ಅನೇಕ ಪ್ರಶ್ನೆಗಳು ಹುಟ್ಟುತ್ತವೆ. ಕೇವಲ ವಿಧಿ ಲಿಖಿತವನ್ನೇ ನಂಬಿ ಮುಂದೆ ಸಾಗಬೇಕೆಂದರೆ ನಮ್ಮ ಪ್ರಯತ್ನಕ್ಕೆ ಅರ್ಥವೇ ಇಲ್ಲವೆ? ಗುರಿಯನ್ನು ಹೊಂದಿರದ, ಕನಸನ್ನು ಒಳಗೊಂಡಿರದ ಜೀವನ ನಿಸ್ಸಾರವಾಗಿದೆ? ಇಂತಹ ಬದುಕಿಗೆ ಅರ್ಥವಿದೆಯೆ?

'ವಿಧಿಲಿಖಿತ' ಎಂದ ಮಾತ್ರಕ್ಕೆ ನಾವು ಪ್ರಯತ್ನ ಪಡಬಾರದು ಎಂದರ್ಥವಲ್ಲ. ಆದರೆ ನಾವು ಸೃಷ್ಟಿಯ ನಿಯಮಕ್ಕೆ ಬದ್ಧರಾಗಿದ್ದೇವೆ. ಸಾವು ಜೀವನದ ಅಂತಿಮ ಸತ್ಯ. ಅದು ಯಾವ ರೂಪದಲ್ಲಿ ಯಾವ ಸಮಯದಲ್ಲಿ ಬರುತ್ತದೆಯೆಂದು ಮಾತ್ರ ಹೇಳಲಾಗದು.

**ಯಾರೂ ಶಾಶ್ವತವಲ್ಲ ಈ ಜಗದಿ**
**ಒಬ್ಬರ ನಂತರ ಇನ್ನೊಬ್ಬರ ಸರದಿ**
**ಜೀವನದ ತೆರೆಯನೆಳೆಯಲು ಈಶ**
**ಕಳಚಿ ಬೀಳುವುದು ಹಾಕಿದ ವೇಷ**

ಬದುಕು ನಶ್ವರ ನಿಜ. ಆದರೆ ನಾವು ಬದುಕಿರುವಾಗ ನಮ್ಮ ಬದುಕನ್ನು ರೂಪಿಸಿಕೊಳ್ಳುವ ಇಚ್ಛಾಶಕ್ತಿ ನಮ್ಮದೇ ಅಲ್ಲವೆ? ನಾವು ಎಷ್ಟು ಕಾಲ ಬದುಕಿದ್ದೇವೆ ಎನ್ನುವದಕ್ಕಿಂತ ಹೇಗೆ ಬದುಕುತ್ತೇವೆ ಎನ್ನುವದು ಮುಖ್ಯವಾಗುತ್ತದೆ. ಸತ್ಪುರುಷರು ಜೀವನದಿಂದ ದೂರವಾದರೂ ತಮ್ಮ ಸತ್ಕಾರ್ಯಗಳ ಮೂಲಕ ಜನಮನದಲ್ಲಿ ನೆಲೆಸುತ್ತಾರೆ. ಅವರ ಆದರ್ಶಗಳು ಜೀವಂತವಾಗಿರುತ್ತವೆ.

ಈ ನಶ್ವರವಾದ ಬದುಕಿನಲ್ಲಿ ಪ್ರತಿಕ್ಷಣವೂ ಅರ್ಥಪೂರ್ಣವಾಗಿ ಬದುಕಬೇಕು. ನಾವೂ ಬದುಕಬೇಕು, ಇತರರಿಗೂ ಬದುಕಗೊಡಬೇಕು. ಸುತ್ತ ಮುತ್ತಲಿನ ಪರಿಸರಕ್ಕೆ ಸ್ಪಂದಿಸುತ್ತ, ನಮ್ಮಿಂದಾದ ಸಹಾಯವನ್ನು ಮಾಡುತ್ತ, ನಾವೂ ನಕ್ಕು ಇತರರನ್ನೂ ನಗಿಸುತ್ತ ಮುಂದೆ ಸಾಗಿದರೆ ಮಾತ್ರ ಈ ಬಾಳಿಗೆ ಅರ್ಥವಿದೆ.

e-mail : amitabhagwat@gmail.com

Amita S Bhagwat

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2009)*

# PRESIDENT'S MESSAGE

Dear Friends,

We are pleased to note that our Website (www.havyakamumbai.com) has been visited by many members. Some of the suggestions received from our members are already implemented. Members have also expressed their happiness that our mouth piece, Havyaka Sandesha, is uploaded every month in our website. The added advantage is that even though there is postal delay one can log on to the site and update himself with the information.

We are happy to inform that we are making progress regarding the sale of the Panvel land. We are approached by prospective buyers and around Rs. 70,000/- per gunta is quoted as the price. We are looking into the matter and the final decision will be taken only after holding a Special General Body Meeting.

We are in the process of getting NA to the Dombivali Land. The notice period has expired on 5th June 2010. (The paper notice by the be Tahashildar had appeared on 5th May 2010 in Marathi paper.) We have reached the final stage and we are sure that the formalities will be completed soon. Now we are making master plan regarding construction of Community hall and Old Age Home.

It is a great shock to our managing committee to know that Dr. Raghuveer Bhat, who served our Trust with dedication, is no more. His service to the Trust as Hon. Editor will be always remembered. It was also his vision to have Havyakara Bhavan and Old Age Home. His untimely demise is an irrepairable loss to our Trust.

We also regret the sad demise of Shri G.S. Avadhani who had also worked for our Trust.

Friends, we should join together and work towards building a strong Havyaka Community, Havyakara Bhavana and Old Age Home.

With warm regards

**N. R. Hegde**
***President***


## AVAILABLE FOR RENT

A flat at Dombivli belonging to Havyaka Welfare Trust consisting of a hall, kitchen, 2 bed rooms, admeasuring 655 sq. feet with two toilets and bathrooms is available for rent.

A hall at Dombivli, belonging to Havyaka Welfare Trust, admeasuring 600 sq. feet (popularly known as Dhyan Mandir) with garden is available for rent which can be used for conducting classes, programs etc.

*Interested persons may please contact :*

**Shri N. R. Hegde Cell : 9820332240 • Shri Ramakant Shastri Cell : 9819452286**


*PAGE DONATED BY : **SMT. GANGA P. BHAGWAT,** PRABHADEVI, IN MEMORY OF LATE SHRI P. R. BHAGWAT (DEC.-2010)*

# ಶ್ರದ್ಧಾಂಜಲಿ



ಜನಪ್ರಿಯ ವೈದ್ಯ, ಹೆಸರಾಂತ ಕವಿ, ಲೇಖಕ, ಪರಿಸರ ಪ್ರೇಮಿ, ಸಮಾಜ ಸೇವಕ ಡಾ. ರಘುವೀರ ಭಟ್ ಇನ್ನಿಲ್ಲ. 59 ವರ್ಷದ ಡಾ. ಭಟ್‌ರವರು ತಾ. 09.06.2010ರಂದು ಅಲ್ಪಕಾಲದ ಅನಾರೋಗ್ಯದಿಂದ ನಿಧನ ಹೊಂದಿದರು.

ಡಾ. ರಘುವೀರ ಭಟ್‌ರವರದ್ದು ಬಹುಮುಖ ಪ್ರತಿಭೆ. 1951ರಲ್ಲಿ ಧಾರವಾಡದಲ್ಲಿ ಜನಿಸಿದ ಇವರು ಅಲ್ಲಿಯ ಸಂಸ್ಕೃತಿಯ ಹಿರಿಮೆ ಗರಿಮೆಗಳನ್ನು ಮೈಗೂಡಿಸಿ-ಕೊಂಡವರು. ಕನ್ನಡದ ಹಿರಿಯ ಕವಿ ದಿವಂಗತ ವಿ. ಜಿ. ಭಟ್‌ರ ಸುಪುತ್ರರಾದ ಇವರಿಗೆ ಬರೆಯುವ ಕಲೆ ಬಹುಶಃ ತಂದೆಯಿಂದ ಬಳುವಳಿಯಾಗಿ ಬಂದಿರಬೇಕು. ಆದರೂ ಕೂಡ ತಾನು ಪ್ರಸಿದ್ಧ ಕವಿಯ ಮಗ ಎಂದು ಮೇಲರಿಮೆಯನ್ನು ತೋರದೆ ಪ್ರಾಮಾಣಿಕವಾಗಿ ಸಾಹಿತ್ಯದಲ್ಲಿ ಕೃಷಿ ಮಾಡಿದರು. 'ಕಾವ್ಯ' ಇವರ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿತ್ತು. ತಂದೆಯವರ ಕೊನೆಯ ಕಾವ್ಯ ಸಂಕಲನ 'ಅಂತಿಮ ಪ್ರಾರ್ಥನೆ'ಯೊಂದಿಗೆ ಮಗ ರಘುವೀರರ 'ಪ್ರಥಮ ಚುಂಬನ' ಕಾವ್ಯ ಸಂಕಲನ ಬೆಳಕು ಕಂಡಿತು. ನಂತರ ಇವರ ಬರೆಹಗಳಲ್ಲಿ ಅರಳಿದ ಕಾವ್ಯ ಸಂಕಲನಗಳೆಂದರೆ 'ಆಲಿಂಗನ', 'ಮಿಲನ', 'ಸಂತಾನ'. 'ಆಲಿಂಗನ' ಕಾವ್ಯ ಸಂಕಲನದಲ್ಲಿ ವೈದ್ಯಕೀಯ ಹಿನ್ನೆಲೆಯಲ್ಲಿ ರೋಗಗಳನ್ನು ಕಾವ್ಯ ರೂಪದಲ್ಲಿ ಹೊರತಂದು ಹೊಸತನವನ್ನು ತೋರಿದರು. ಅನಂತರ 'ಮಿಲನ'ದಲ್ಲಿ ಲೈಂಗಿಕ ಶಿಕ್ಷಣವನ್ನು ಕಾವ್ಯರೂಪದಲ್ಲಿ ಜನತೆಗೆ ನಿರೂಪಿಸಿದ್ದಾರೆ. ಯಾವುದೇ ವಿಷಯವನ್ನು ಲಘುವಾಗಿ ತಿಳಿಹಾಸ್ಯದೊಂದಿಗೆ ಮನಮುಟ್ಟುವಂತೆ ಹೇಳುವ ಕಲೆ ಇವರಿಗೆ ಒಲಿದಿತ್ತು. ಜೊತೆಗೆ ಚುರುಕುತನ, ಆಕಸ್ಮಿಕ ತಿರುವು ಹಾಗೂ ಛಂದೋವಿಲಾಸವೂ ಕೂಡಿದಂತೆ ಅವರ ಕವಿತೆಗಳು ಮನಸೆಳೆಯುತ್ತವೆ. ಅನೇಕ ಕವಿಗೋಷ್ಠಿಗಳಲ್ಲಿ ಇವರು ಕವಿಯಾಗಿ, ಅಧ್ಯಕ್ಷರಾಗಿ ಭಾಗವಹಿಸಿದ್ದಾರೆ. ಕನ್ನಡ ಹಾಗೂ ಆಂಗ್ಲ ಭಾಷೆಗಳಲ್ಲಿಯೂ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಹವ್ಯಕ ವೆಲ್ಫೇರ್ ಟ್ರಸ್ಟಿನ ಕಾರ್ಯಕಲಾಪಗಳಲ್ಲಿ ಅನೇಕ ವರ್ಷಗಳಿಂದ ಅವರು ಸಕ್ರೀಯವಾಗಿ ತೊಡಗಿಸಿಕೊಂಡಿದ್ದರು. ಹಿಂದಿನ ಸಂಪಾದಕರಾದ ಆರ್. ಎನ್. ಹೆಗಡೆ ಬಂಡಿಮನೆಯವರು ಆಕಸ್ಮಿಕವಾಗಿ ವರ್ಗವಾಗಿ ಮುಂಬಯಿಯನ್ನು ಬಿಟ್ಟು ಹೋಗುವ ಪ್ರಸಂಗ ಬಂದಾಗ ಅವರ ಕೋರಿಕೆಯ ಮೇರೆಗೆ 'ಹವ್ಯಕ ಸಂದೇಶ'ದ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರಲ್ಲದೇ ಅದಕ್ಕೆ ಹೊಸ ರೂಪವನ್ನು ಕೊಟ್ಟರು. 'ಕನ್ನಡ ಕಲಿಯೋಣ ಬನ್ನಿ', 'ವ್ಯಕ್ತಿ ವಿಶೇಷ' ಮಾಲೆಗಳೊಂದಿಗೆ ತಮ್ಮ ಬರೆಹಗಳಿಂದಲೂ 'ಹವ್ಯಕ ಸಂದೇಶ'ದ ಗುಣಮಟ್ಟವನ್ನು ಹೆಚ್ಚಿಸಿದರು. ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿ ನಿಧಿಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಶ್ರಮವಹಿಸಿದ ಅವರು ಆ ಕಾರ್ಯಕ್ರಮದ ಯಶಸ್ಸಿಗೂ ಕಾರಣರಾದರು. ಟ್ರಸ್ಟಿನ ಕಾರ್ಯಗಳಲ್ಲಿ ಹೆಚ್ಚಿದ ಜವಾಬ್ದಾರಿಯಿಂದ ಮೂರು ವರ್ಷಗಳ ಹಿಂದೆ 'ಹವ್ಯಕ ಸಂದೇಶ'ದ ಜವಾಬ್ದಾರಿಯನ್ನು ಹಸ್ತಾಂತರಿಸಿದರು. 'ಹವ್ಯಕರ ಭವನ' ಅವರ ಕನಸಾಗಿತ್ತು. ಅದಿನ್ನೂ ನನಸಾಗಬೇಕಾಗಿದೆ.

ಮುಂಬಯಿಯಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯವನ್ನು ತಡೆಯಲು, ಸ್ವಚ್ಛ ಹಸಿರು ವಾತಾವರಣವನ್ನು ನಿರ್ಮಿಸಲು 'ಸಾಫ್ ಆಂಗನ್' ಯೋಜನೆಯಲ್ಲಿ ಭಾಗವಹಿಸಿದರು. ಉತ್ತಮವಾಗಿ ಕಾರ್ಯ ನಿರ್ವಹಿಸಿದರು. 'ಸಾಫ್ ಸಂಕಲ್ಪ' ತ್ರೈಮಾಸಿಕದ ಸಂಪಾದಕರಾಗಿಯೂ ಸೇವೆ ಸಲ್ಲಿಸಿದರು.

ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣ, ಹುಬ್ಬಳ್ಳಿಯಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಮುಂಬಯಿಯಲ್ಲಿ ಚರ್ಮ ಹಾಗೂ ಲೈಂಗಿಕ ರೋಗಗಳಲ್ಲಿ ಡಿಪ್ಲೋಮಾ ಪಡೆದು ಮುಂಬಯಿಯಲ್ಲಿ ವೃತ್ತಿ ಜೀವನವನ್ನು ಪ್ರಾರಂಭಿಸಿದ ಅವರು ನಿಜವಾದ ಅರ್ಥದಲ್ಲಿ ವೈದ್ಯರಾಗಿದ್ದರು. ತಮ್ಮ ವೈದ್ಯಕೀಯ ವೃತ್ತಿಯಲ್ಲಿ ಜನರ ನೋವುಗಳಿಗೆ ಸ್ಪಂದಿಸುತ್ತ, ರೋಗಿಗಳಲ್ಲಿ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಂಡು ಮಾನವೀಯತೆಯನ್ನು ಮೆರೆದರು.

ಹುಟ್ಟು ಸಾವುಗಳ ಮೂಲವನ್ನು ಹುಡುಕುವ ಗೋಜಿಗೆ ಹೋಗದ ಡಾ. ರಘುವೀರ ಭಟ್‌ರವರು ಪ್ರತಿಕ್ಷಣವನ್ನೂ ಲವಲವಿಕೆಯಿಂದ ಅರ್ಥಪೂರ್ಣವಾಗಿ ಬದುಕಬೇಕು ಎನ್ನುವ ಉದ್ದೇಶವನ್ನು ಹೊಂದಿದ್ದರು. ಸುತ್ತ ಮುತ್ತಲಿನ ಸಮಾಜಕ್ಕೆ ಉಪಯೋಗವಾಗುವಂತೆ ಬದುಕಿದರೆ ಮಾತ್ರ ಜೀವನಕ್ಕೆ ಅರ್ಥವಿದೆ ಎಂದು ನಂಬಿದ್ದರು. ಅದರಂತೆಯೇ ನಡೆದುಕೊಂಡರು. ಅವರದು ನೇರವಾದ ನಡೆ-ನುಡಿ. ಔಪಚಾರಿಕತೆ ಅವರ ಬಳಿಗೆಲ್ಲೂ ಸುಳಿಯುತ್ತಿರಲಿಲ್ಲ. ನೆನೆದಂತೆ ನುಡಿಯುವವರು, ನುಡಿದಂತೆ ನಡೆಯುವವರು. ಯಾವ ಕೆಲಸವನ್ನಾದರೂ ಪಟ್ಟು ಬಿಡದೆ ಮನಪೂರ್ವಕವಾಗಿ ಮಾಡುವವರು. ಅದಮ್ಯ ಕಾರ್ಯ ದಕ್ಷತೆಯುಳ್ಳ ಡಾ. ರಘುವೀರ ಭಟ್ಟರು ಇನ್ನೂ ಈ ಸಮಾಜಕ್ಕೆ ಬೇಕಾದವರಾಗಿದ್ದರು. ಆದರೆ ವಿಧಿ ಲಿಖಿತ ಬೇರೆಯಾಗಿತ್ತು. ಅವರು ತಮ್ಮ ಪತ್ನಿ ಡಾ| ಲಲಿತಾ ಭಟ್, ಪುತ್ರಿ ನಮ್ರತಾ ಹಾಗೂ ಪುತ್ರ ನಿರಂಜನನನ್ನು ಅಗಲಿದ್ದಾರೆ.

ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು ಅವರ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಅವರ ಕುಟುಂಬಕ್ಕೆ ಆಘಾತವನ್ನು ಭರಿಸುವ ಶಕ್ತಿ ಕೊಡಲಿ ಎಂದು ಪರಮಾತ್ಮನನ್ನು ಬೇಡಿಕೊಳ್ಳುತ್ತೇವೆ ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ. ●

*PAGE DONATED BY :* ***SMT. UMA SWAMY, NAVI MUMBAI IN THE MEMORY OF HER MOTHER LATE SMT. SEETA M. HEGDE*** *(DEC.-2009)*

# ಭಾಸ ಬೋಧ

**- ಪ್ರೊ। ವಿಷ್ಣು ಜೋಶಿ, ಕುಮಟಾ**

## ನಿಷ್ಕಲ್ಮಶ ಪ್ರೇಮ ಅವಿನಾಶಿ

**ಜಲೇಭಿದ್ರಂ ಕರ್ತುಂ ಪ್ರಭವತಿ ನ ಸೂಚೀ ನಿಶಿತಾ**
**( ಯಜ್ಞಫಲ 2-29 )**

ಹರಿತವಾದ ಸೂಜಿಯು ನೀರನ್ನು ಭೇದಿಸಲಾರದು. ಪರಸ್ಪರರು ಚೆನ್ನಾಗಿ ಅರಿತ, ಸ್ವಾರ್ಥ ಮೂಲವಲ್ಲದ. ಹೊರಗಿನ ಕಾರಣಗಳನ್ನು ಅವಲಂಬಿಸಿರದ ಪ್ರೀತಿಯು ಅವಿನಾಶಿ. ಅದನ್ನು ನಾಶ ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವುದು ಭಾಸಕವಿಯ ಅಭಿಪ್ರಾಯ. ಸೂಜಿ ಎಷ್ಟೇ ಹರಿತವಾಗಿದ್ದರೂ ನೀರಿನಲ್ಲಿ ರಂಧ್ರ ಕೊರೆಯಲಾರದು. ಅದರಂತೆ ಬಾಹ್ಯ ಶಕ್ತಿಗಳು ಪ್ರೀತಿಯನ್ನು ಭೇದಿಸಲಾರವು.

''ಪ್ರೀತಿ'', ''ಪ್ರೇಮ'' ಈ ಶಬ್ದ ಇಂದು ಅಪಮೌಲ್ಯಗೊಂಡಿದೆ. ಕಾರಣ ಸಂಸ್ಕಾರ ಹೀನರು ಈ ಉನ್ನತವಾದ ಭಾವನೆಯನ್ನು ವಿರೂಪಗೊಳಿಸಿದ್ದಾರೆ. ನಿಜವಾದ ಪ್ರೀತಿಯವನ್ನು ಚಿತ್ರಿಸಲು ಹೊರಟ ನಮ್ಮ ಸಿನೇಮಾದವರು ಬೇರಿನ್ನನ್ನೇನೋ ಚಿತ್ರಿಸುತ್ತಿದ್ದಾರೆ. ಗಣಪತಿಯನ್ನು ಮಾಡಲಿಕ್ಕೆ ಹೊರಟ ಶಿಲ್ಪಿ ಹನುಮಂತನನ್ನು ಮಾಡಿದಂತೆ ಆಗಿದೆ. ನಮ್ಮ ಚಿತ್ರ ರಂಗದ ಪ್ರೇಮ ಚಿತ್ರಣ, ನಟಿಯರ ಬೆತ್ತಲೆ ದೇಹ ಪ್ರದರ್ಶನ, ಇದ್ದ ಬಿದ್ದ ಮರಗಳನ್ನೆಲ್ಲ ಗರಗರನೆ ಸುತ್ತು ಹಾಕುವುದು, ಬೆಟ್ಟ ಬೇಣಗಳಲ್ಲಿ ಹೊರಳಾಡುವುದು, ನೀರಿನಲ್ಲಿ ಮುಳುಗಿ ಏಳುವುದು. ಇವೆಲ್ಲ ಪ್ರೇಮ ಚಿತ್ರಣಕ್ಕೆ ನಮ್ಮ ಸಿನೇಮಾಗಳಲ್ಲಿ ಪೂರಕವಾಗಿ ಬರುವ ಸನ್ನಿವೇಶಗಳು. ಉದಾತ್ತ ಪ್ರೇಮವನ್ನು ಸಂಕೇತಿಸುವ ವಿಧಿ-ವಿಧಾನಗಳು ತಿಳಿಯದಷ್ಟರ ಮಟ್ಟಿಗೆ ನಮ್ಮ ಚಿತ್ರರಂಗ ಬೌದ್ಧಿಕವಾಗಿ ಬಡವಾಗಿದೆ. ಸಿನೇಮಾದಲ್ಲಿ ತೋರಿಸಿದ್ದೆಲ್ಲ ಸತ್ಯ ಎಂದು ತಿಳಿದ ಕೆಲವು ಪೆಡ್ಡೆ ಹುಡುಗರು ಅಲ್ಲಿ ತೋರಿಸಿದ ''ಹಿರೋ''ಗಳನ್ನು ಅನುಕರಿಸುತ್ತಾ ಅಭ್ಯಾಸಾಧಿಗಳನ್ನು ಅಲಕ್ಷಿಸಿ ತಿರುಗುತ್ತಿರುವುದನ್ನು ನೋಡಿದರೆ ಇವರೆಲ್ಲ ಯಾವುದೋ ತಪ್ಪಿಗೆ ಈ ರೀತಿಯ ಪ್ರಾಯಶ್ಚಿತವನ್ನು ಅನುಭವಿಸುತ್ತಿರಬಹುದೇ? ಎಂದು ಅನಿಸುತ್ತದೆ.

ಪ್ರೀತಿಗೆ ಹಲವು ಮುಖ. ಅದು ಹೆಣ್ಣು-ಗಂಡಿನ ಮಧ್ಯವೇ ಇರಬೇಕೆಂದಿಲ್ಲ. ತಾಯಿ-ಮಕ್ಕಳ ವಾತ್ಸಲ್ಯ ಇದು ಪ್ರೀತಿಯ ರೂಪವೇ ಆಗಿದೆ. ಅಣ್ಣ-ತಮ್ಮಂದಿರ ಪರಸ್ಪರ ಒಲವು ಇದು ಪ್ರೀತಿಯ ಪ್ರಭಾವವೇ ಆಗಿದೆ. ''ಪ್ರೀತಿ'' ಎನ್ನುವ ಶಬ್ದದ ಘನತೆ ಗಾಂಭೀರ್ಯವನ್ನು ''ಲವ್'' ಎನ್ನುವ ಆಂಗ್ಲ ಪದ ತುಂಬಲಾರದು. ಆದ ಕಾರಣ ಪ್ರೀತಿ ಪ್ರೀತಿಯೇ.

**''ಅನಿರ್ವಚನೀಯಮ್ ಪ್ರೇಮ ಸ್ವರೂಪಮ್''**
**( ನಾರದೀಯ ಭಕ್ತಿ ಸೂತ್ರ 1-51 )**

ಪ್ರೇಮದ ಸ್ವರೂಪವೇ ಅನಿರ್ವಚನೀಯ, ಅಂದರೆ ಶಬ್ದ ಶಕ್ತಿಗೆ ಆ ಉನ್ನತ ಭಾವನೆಯನ್ನು ಸೆರೆಹಿಡಿಯುವ ಶಕ್ತಿ ಇಲ್ಲ ಎಂದು ಅರ್ಥ. ನಿಜವಾದ ಪ್ರೀತಿ ತ್ಯಾಗದಲ್ಲಿ ಪ್ರಕಟವಾಗುತ್ತದೆ ಹಾಗೂ ಅದರ ಭಾಷೆ ಮೌನವೇ ಆಗಿರುತ್ತದೆ. ಕೇವಲ ಮಾತಿನ ಆಡಂಬರದಿಂದ ಕೂಡಿರುವ ಪ್ರೀತಿ ಪ್ರೀತಿಯಲ್ಲ. ಆದರೆ ಫಜೀತಿ.

**ನ ಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತಿ**
**( ಉತ್ತರ ರಾಮ ಚರಿತೆ 6-12 )**

ಅಂದರೆ ಬಾಹ್ಯ ವಸ್ತುಗಳನ್ನು ಪ್ರೀತಿಯೂ ಅವಲಂಬಿಸಿರುವುದಿಲ್ಲ. ನಿಜವಾದ ಪ್ರೀತಿಯು ಎಲ್ಲವನ್ನೂ ಕೊಡುತ್ತದೆ ಹೊರತು ಏನನ್ನೂ ಬಯಸುವುದಿಲ್ಲ. ಆದರೆ ಪ್ರೀತಿಯು ಕಾರಣವನ್ನು ಬಯಸುತ್ತದೆ. ಅಥವಾ ಪ್ರೇಮವು ಪ್ರಯೋಜನವನ್ನು ಅಪೇಕ್ಷಿಸುತ್ತದೆ. ಈ ಜಗತ್ತಿನಲ್ಲಿ ಯಾರು ಯಾರಿಗೂ ಪ್ರಿಯರಲ್ಲ.

**ಕಾರ್ಯಾರ್ಥೀ ಜೀವಲೋಕೋಯಂ ನಕಶ್ಚಿತ್ ಕಸ್ಯಚಿತ್ ಪ್ರಿಯಃ ॥**
**( ಮಹಾಭಾರತ 12-138-51 )**

ಈ ಜಗತ್ತು ಕಾರ್ಯ ಕಾರಣ ಸಂಬಂಧದ ಮೇಲೆ ನಿಂತಿದೆ. ಪ್ರತಿ ಕೆಲಸವು ಪ್ರಯೋಜನವನ್ನು ಅಪೇಕ್ಷಿಸುತ್ತದೆ. ಪ್ರಯೋಜನ ಇಲ್ಲದೇ ಇದ್ದರೆ ಯಾರು ಯಾರಿಗೂ ಪ್ರಿಯರಲ್ಲ. ಶ್ರೀ ರಾಮಚಂದ್ರ, ಲಕ್ಷ್ಮಣ, ಭರತ, ಶತ್ರುಘ್ನ ಇವರ ನಿಷ್ಕಲ್ಮಶ, ಅಭಿಜಾತ ಪ್ರೀತಿಯನ್ನು ರಾಜ್ಯದ ಆಸೆ ಎನ್ನುವ ಸೂಜಿ ಛಿದ್ರ ಮಾಡಲಿಲ್ಲವಂತೆ. ಅಂತಹ ಪ್ರೀತಿ ಜಗತ್ತಿನಲ್ಲಿ ಅಣ್ಣ-ತಮ್ಮಂದಿರಲ್ಲಿ ಇದ್ದಾಗ ಆ ಕುಟುಂಬ ಸುಂದರ-ಭಾವ ಬಂಧುರ ಎನ್ನುವುದು ಆದರ್ಶದ ಕನಸುಗಾರ ಭಾಸಕವಿಯ ಸಂದೇಶ. ●

# ಚಿಂತನ - ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

## ಪ್ರಯಾಣದ ಸಮಯದಲ್ಲಿ...

ಡೊಂಬಿವಿಲಿಯಿಂದ ಛತ್ರಪತಿ ಶಿವಾಜಿ ಟರ್ಮಿನಸ್ಸಿಗೆ ನನಗೆ ಹೋಗಬೇಕಾಗಿತ್ತು. ಎರಡನೇ ವರ್ಗದಲ್ಲಿ ಗಲಾಟೆ, ನೂಕು ನುಗ್ಗಲು ಇರುವದೆಂದು ಮೊದಲನೇ ವರ್ಗದ ಟಿಕೇಟು ಪಡೆದು ಲೋಕಲ್ ಟ್ರೇನೊಂದನ್ನು ಹತ್ತಿ ಒಂದು ಸ್ಥಳದಲ್ಲಿ ಕುಳಿತೆ. ನನ್ನೊಡನೆ ಓರ್ವ ಮಹಿಳೆಯೂ ಹತ್ತಿದಳು. ಅವಳನ್ನು ನೋಡಿದೊಡನೆ ಅವಳು ಯಾವುದೋ ಕಚೇರಿಯಲ್ಲಿ ದುಡಿಯುವ ಮಹಿಳೆಯೆಂಬುದು ಅವಳ ನಡತೆಯಿಂದಲೇ ತಿಳಿದು ಬಂದಿತು. ತನ್ನ ಸ್ಥಾನದಲ್ಲಿ ಅವಳು ಕುಳಿತೊಡನೆ, ತನ್ನ ಚೀಲದಿಂದ ಕಾಯಿಪಲ್ಲೆ ಹೊರತೆಗೆದು ತನ್ನ ತೊಡೆಯ ಮೇಲೆ ವರ್ತಮಾನ ಪತ್ರಿಕೆಯನ್ನು ಹರಡಿಕೊಂಡು ಕಾಯಿಪಲ್ಲೆ ಹಸನಗೊಳಿಸತೊಡಗಿದಳು.

ಮರುದಿನ ಮುಂಜಾನೆ ಸುಮಾರು ಒಂಬತ್ತು ಗಂಟೆಗೆ ನನ್ನ ಮಿತ್ರನ ಕಾರಿನಲ್ಲಿ ನಾವೀರ್ವರೂ ಅವನ ಫ್ಯಾಕ್ಟರಿಗೆ ಹೊರಟೆವು. ಕಾರನ್ನೇರಿದ ಕೂಡಲೆ ಅವನು ತನ್ನ ಮೊಬೈಲಿನಿಂದ ಫೋನಿಸಿ ಆಗಬೇಕಾದ ಕೆಲಸಗಳ ಬಗ್ಗೆ ಮಾರ್ಗದರ್ಶನ ಮಾಡುತ್ತಲಿದ್ದ. ನಮ್ಮ ಕಾರು ಫ್ಯಾಕ್ಟರಿ ತಲುಪಲು ಹದಿನೈದು ನಿಮಿಷಗಳಿರುವಾಗ ಅವನ ಮಾತುಕತೆ ಮುಗಿದು ಸುಮ್ಮನೆ ಕುಳಿತು, ಮೊಬೈಲಿನ ಯಾವುದೋ ಬಟನ್ ಒತ್ತಿ ಶ್ರೀಮತಿ ಸುಬ್ಬಲಕ್ಷ್ಮೀಯ ಭಜನೆಗಳನ್ನು ತಾನೂ ಕೇಳುತ್ತ, ನನಗೂ ಕೇಳಿಸಿದ.

ಅಮೇರಿಕೆಯಲ್ಲಿ ನನ್ನ ಅಳಿಯ ಬೆಳಗಿನ ನಸುಕಿನಲ್ಲಿ ಕೆಲಸಕ್ಕೆ ಹೊರಡುವಾಗ ಸ್ಯಾಂಡ್‌ವಿಚ್ ಮತ್ತು ಕಾಫಿಯನ್ನು ತನ್ನ ಕಾರಿಗೆ ತೆಗೆದುಕೊಂಡು ಹೋಗುವಾಗ ನಾನು ಅವನನ್ನು ಕೇಳಿದೆ. ನಿನ್ನ ಫ್ಯಾಕ್ಟರಿಗೆ ಮುಟ್ಟಲು ನಿನಗೆ ಕನಿಷ್ಠ ಒಂದು ತಾಸಾದರೂ ಬೇಕು . ಆಗ ಕಾಫಿ ತಣ್ಣಗಾಗಿ ಕುಡಿಯಲು ಶಕ್ಯವೇ? ಎಂದು ಕೇಳಿದೆ. ಅದಕ್ಕವನು ತಾನು ತಿಂಡಿ ತಿಂದು, ಕಾಫಿ ಕುಡಿದು, ಎಫ್.ಎಂ. ರೇಡಿಯೋ ಕೇಳುತ್ತ ಫ್ಯಾಕ್ಟರಿ ತಲುಪುತ್ತೇನೆ ಎಂದ. ಅದೂ ಅಲ್ಲದೆ ಇಲ್ಲಿ ಅಮೇರಿಕೆಯಲ್ಲಿ ಸಮಯದ ಅಭಾವದ ಕಾರಣ ಕಾರಿನಲ್ಲಿಯೇ ದಾಡಿ ಮಾಡಿಕೊಂಡು, ಮುಖತೊಳೆದು ಫ್ರೆಶ್ ಆಗುತ್ತಾರೆ ಎಂದೂ ಹೇಳಿದ.

ಅತ್ಯಂತ ಕೆಲಸದ ಒತ್ತಡದಲ್ಲಿರುವ ಸ್ವಾಮೀಜಿಯವರು ಒಂದು ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಹೊರಟಿದ್ದರು. ನಾನು ಅವರನ್ನು ಕೇಳಿದೆ. 'ಸ್ವಾಮೀಜಿ, ತಾವು ಭಾಷಣವನ್ನು ಸಿದ್ಧತೆಯಿಲ್ಲದೆ ಮಾಡುವದಿಲ್ಲ. ತಮ್ಮ ಮಾತು ಸಿದ್ಧವಾಗಬೇಕೆಂದು ಹೇಳಿದಿರಿ. ಈಗ ಎಲ್ಲಿ, ಹೇಗೆ ಸಿದ್ಧತೆ ಮಾಡಿಕೊಳ್ಳುವಿರಿ?' ಅದಕ್ಕವರು ಕಾರಿನಲ್ಲಿಯೇ ಓದಿ, ಬರೆಯುವ ವ್ಯವಸ್ಥೆ ಮಾಡಿಕೊಂಡಿದ್ದೇನೆ. ನಾನು ಸಮ್ಮೇಳನಕ್ಕೆ ಹೋಗಲು ನನಗೆ 8-10 ತಾಸುಗಳಾದರೂ ಬೇಕು. ಅಷ್ಟರಲ್ಲಿ ನನ್ನ ಭಾಷಣ ತಯಾರಾಗಿ ಬಿಡುತ್ತದೆ' ಎಂದರು.

ಟ್ರೇನು, ವಿಮಾನು, ಬಸ್ಸುಗಳಲ್ಲಿ ಪ್ರಯಾಣಿಸುವಾಗ ಅನೇಕರು ಓದುವದು, ವಿಚಾರ ವಿನಿಮಯ ಮಾಡುವುದು ಇತ್ಯಾದಿ ಸಾಮಾನ್ಯವಾಗಿ ಬಿಟ್ಟಿದೆ. ಇಂದಿನ ಗಡಿಬಿಡಿಯ, ಟ್ರಾಫಿಕ್ ಜಾಮ್‌ನ, ಸಮಯದ ಕೊರತೆಯ ಕಾಲದಲ್ಲಿ ಪ್ರಯಾಣಿಸುವ ಸಮಯವನ್ನು ಸದುಪಯೋಗಗೊಳಿಸಿಕೊಳ್ಳದೆ ಅನ್ಯ ಮಾರ್ಗವಿಲ್ಲ. ಅದ ಅಲ್ಲದೆ, ಆಧುನಿಕ ತಾಂತ್ರಿಕತೆ, ನಮ್ಮ ಸಮಯವನ್ನು ಹಾಳು ಮಾಡಿಕೊಳ್ಳದೆ ಹೇಗೆ ಕೆಲಸವನ್ನು ಪೂರ್ತಿಗೊಳಿಸಲು ಸಹಾಯಕಾರಿಯಾಗಿದೆಯೆಂಬುದು ಒಂದು ಅದ್ಭುತ ಸಂಗತಿ. ●

*PAGE DONATED BY : **SMT. SHANTA V. HEGDE,** CARMICHAEL ROAD (DEC.-2010)*

# ಗೆಳೆತನ

– ಶಶಿಕಲಾ ಹೆಗಡೆ

''ಅರೇ ಅನೂ ಏನೇ ಇಷ್ಟು ದಪ್ಪವಾಗಿದ್ದೀಯಾ? ಗುರುತೇ ಸಿಗುವಂತಿಲ್ಲ''

''ನೀನೇನು ಕಡಿಮೆಯಾ? ಡ್ರಮ್‌ನಂತೆ ಉಬ್ಬಿದ್ದೀಯಾ, ಮೊದಲೇ ದಪ್ಪಗಿದ್ದೆ ನೀನು. ಈಗಂತೂ ಕೇಳುವಂತೆಯೇ ಇಲ್ಲ.''

ಈ ಸಂಭಾಷಣೆಗೆ ಹತ್ತು ವರ್ಷಗಳ ದೀರ್ಘ ಅವಧಿಯ ನಂತರ ಭೇಟಿಯಾದ ಎರಡು ಗೆಳತಿಯರದ್ದು. ಮದುವೆಯಾದ ನಂತರ ಬೇರೆ ಬೇರೆ ಕಡೆ ತಮ್ಮ ತಮ್ಮ ಸಂಗಾತಿಯೊಂದಿಗೆ ವಾಸ್ತವ್ಯ ಹೂಡಿದ್ದರು. ಮಧ್ಯೆ ಒಂದೆರಡು ಸಲ ಭೇಟಿಯಾದರೂ ಈಗ ಹತ್ತು ವರ್ಷಗಳಿಂದ ಒಬ್ಬರನ್ನೊಬ್ಬರು ಭೇಟಿಯಾಗಿರಲಿಲ್ಲ.

ಅನು ಮತ್ತು ಸುಮಾ ಇಬ್ಬರೂ ಹೈಸ್ಕೂಲಿನಿಂದ ಗೆಳತಿಯರು. ಒಬ್ಬರನ್ನು ಬಿಟ್ಟು ಒಬ್ಬರು ಇರುತ್ತಿರಲಿಲ್ಲ. ಏನೇ ಇರಲಿ ಕತೆ ಪುಸ್ತಕದಿಂದ ಹಿಡಿದು ಬಟ್ಟೆ ಬರೆಯವರೆಗೂ ಏನೇ ತೆಗೆದುಕೊಳ್ಳುತ್ತಿದ್ದರೂ ಜೊತೆಯಲ್ಲೇ. ಅಲ್ಲದೇ ಇಬ್ಬರೂ ಒಂದೇ ತರಹದ್ದು. ಕಾಲೇಜಿನಲ್ಲಂತೂ ಎಲ್ಲರೂ ಇವರ ಜೋಡಿಯನ್ನು ನೋಡಿ ನಗುತ್ತಿದ್ದರು. ನೀವು ಒಬ್ಬರನ್ನೊಬ್ಬರು ಮದುವೆಯಾಗುತ್ತೀರಾ? ಎಂದು ತಮಾಷೆಯಾಗಿ ಕೇಳುತ್ತಿದ್ದರು.

ಕಾಲೇಜು ಮುಗಿದ ನಂತರ ಅನೂಳ ಮನೆಯವರು ಬೇಗನೆ ಗಂಡು ಹುಡುಕಿ ಮದುವೆ ಮಾಡಿದ್ದರು. ಅವಳು ಸುಮಾಳನ್ನು ಬಿಡಲಾರದೇ ಬಿಟ್ಟು ತನ್ನ ಗಂಡನೊಡನೆ ಮುಂಬಯಿಗೆ ರವಾನೆಯಾಗಿದ್ದಳು. ಸುಮಾ ತನ್ನ ಮತ್ತೊಂದು ಗೆಳತಿಯ ಅಣ್ಣನೊಂದಿಗೆ ಲವ್ ಮ್ಯಾರೇಜ್ ಮಾಡಿಕೊಂಡು ಬೆಂಗಳೂರು ಸೇರಿದ್ದಳು.

ಈ ಹತ್ತು ವರ್ಷಗಳ ನಂತರದ ಭೇಟಿ ಇಬ್ಬರ ಕಣ್ಣಲ್ಲೂ ನೀರು ತರಿಸಿತ್ತು. ''ಅಲ್ಲ ಸುಮಾ, ಹೈಸ್ಕೂಲು, ಕಾಲೇಜು ದಿನಗಳಲ್ಲಿ ಯಾರಾದರೂ ಹೀಗೆ ನೀವು ಮುಂದೆ ಹತ್ತು ವರ್ಷಗಳವರೆಗೆ ಭೇಟಿಯಾಗದೇ ಇರುತ್ತೀರಿ ಎಂದಿದ್ದರೆ ನಾವು ಅವರನ್ನು ಹಿಡಿದು ಹೊಡೆಯುತ್ತಿದ್ದೇವೋ ಏನೋ? ಅಲ್ಲವೇನೇ?''

''ಹೌದು ಅನು, ಯಾಕೋ ಈ ಸಂಸಾರದ ತಾಪತ್ರಯದಲ್ಲಿ ಒಬ್ಬರನ್ನೊಬ್ಬರು ಮರೆತೇಬಿಟ್ಟಿದ್ದೀವೇನೋ ಅನಿಸುತ್ತಿದೆ''

ಅಷ್ಟರಲ್ಲಿ ಅಲ್ಲೇ ಕುಳಿತು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಅನೂಳ ಗಂಡ ವಿವೇಕ್ ಹೇಳಿದ. ''ಈ ನಿಮ್ಮ ಕಷ್ಟಕ್ಕೆ ನಾನೊಂದು ಒಳ್ಳೆಯ ಉಪಾಯ ಹೇಳುತ್ತೇನೆ. ಸುಮಾಳ ಮಗಳು ಆಕಾಂಕ್ಷಳನ್ನು ನಮ್ಮ ಮಗ ಆಕಾಶ್‌ಗೆ ತಂದುಕೊಂಡರೆ ಆಯಿತು. ಈಗಲ್ಲದಿದ್ದರೂ ಮುಂದಾದರೂ ನೀವು ಒಬ್ಬರಿಗೊಬ್ಬರು ಭೇಟಿಯಾಗುತ್ತಾ ಇರಬಹುದು''.

ಈ ಮಾತಿಗೆ ಗೆಳತಿಯರಿಬ್ಬರೂ ಮುಖ ನೋಡಿಕೊಂಡರು. ಇದರಲ್ಲಿ ಏನೋ ಹುರುಳಿದೆ ಎನಿಸಿತು. ಎಸ್.ಎಸ್.ಎಲ್.ಸಿ. ಮುಗಿಸಿರುವ ಆಕಾಂಕ್ಷ ಹಾಗೂ ಪಿ.ಯು.ಸಿ ಮುಗಿಸಿರುವ ಆಕಾಶ್ ಇಬ್ಬರೂ ಅವರ ಕಣ್ಣು ಮುಂದೆ ತೇಲಿ ಬಂದರು. ಇಂದಲ್ಲದಿದ್ದರೂ ಮುಂದೊಂದು ದಿನ ಯಾರ ಜೊತೆಗಾದರೂ ಅವರ ಮದುವೆ ಮಾಡಲೇಬೇಕು. ಅದರ ಬದಲು ಅವರಿಬ್ಬರನ್ನೂ ಯಾಕೆ ಒಂದು ಗೂಡಿಸಬಾರದು? ಗೆಳತಿಯರಿಬ್ಬರ ಮನಸ್ಸಲ್ಲೂ ಒಂದೇ ನಿರ್ಧಾರ ಮೂಡಿತು. ಇಬ್ಬರೂ ಪರಸ್ಪರ ಮಾತನಾಡಿ ಒಪ್ಪಿದರು. ಮಕ್ಕಳಿಬ್ಬರನ್ನೂ ಭೇಟಿ ಮಾಡಿಸಿದರು. ಸೂಕ್ಷ್ಮವಾಗಿ ಮಕ್ಕಳಿಗೂ ಅವರ ಭವಿಷ್ಯದ ನಿರ್ಧಾರ ತಿಳಿಸಿದರು.

ಮರುದಿನವೇ ಇಬ್ಬರೂ ಒಬ್ಬರಿಗೊಬ್ಬರು ಬೈ ಹೇಳಿ, ತಂತಮ್ಮ ಊರಿಗೆ ಮರಳಿದ್ದರು. ಅದೇ ತಿಂಗಳಲ್ಲಿ ಅನೂಳ ಗಂಡ ವಿವೇಕನಿಗೆ ಅಮೆರಿಕಾದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದ್ದರಿಂದ ಹೆಂಡತಿ, ಮಗನೊಂದಿಗೆ ವಿದೇಶಕ್ಕೆ ಹಾರಿದ. ಮತ್ತೆ ಏಳು ವರ್ಷಗಳ ವರೆಗೆ ಅನು ಹಾಗೂ ಸುಮಾಳ ಭೇಟಿಯಾಗಲಿಲ್ಲ. ಫೋನಿನ ಸಂಪರ್ಕವೂ ಇರಲಿಲ್ಲ.

ಏಳು ವರ್ಷಗಳ ನಂತರ ಅನು, ಗಂಡ ಹಾಗೂ ಮಗನೊಂದಿಗೆ ಭಾರತಕ್ಕೆ ಬಂದಳು. ಸುಮಾಳನ್ನು ಭೇಟಿಯಾಗಿ ತನ್ನ ನಿರ್ಧಾರವನ್ನು ತಿಳಿಸಬೇಕೆಂದು ತಾವು ಬೆಂಗಳೂರಿಗೆ ಬರುವುದಾಗಿ ಫೋನ್ ಮಾಡಿದಳು.

ಅನು ಬರುವ ಸುದ್ದಿ ಕೇಳಿ ಸುಮಾ ಸಂಭ್ರಮಗೊಂಡಳು. ಮಗಳಿಗೂ ಕೂಡ ಬಂದವರ ಜೊತೆ ಚೆನ್ನಾಗಿ ಹೊಂದಿಕೊಂಡು ಹೋಗಲು ತಿಳಿಸಿದಳು. ಸಂಜೆ ಮನೆಯ ಮುಂದೆ ಕಾರು ನಿಂತ ಕೂಡಲೇ ಸುಮಾ, ಆಕಾಂಕ್ಷ ಬಾಗಿಲಿಗೆ ಓಡಿದರು. ಮೊದಲು ಇಳಿದವಳು ಅನು, ನಂತರ ವಿವೇಕ, ಅವರಿಬ್ಬರ ಹಿಂದೆ ಕೋಲೂರಿಕೊಂಡು ಇಳಿದ ಆಕಾಶ್‌ನನ್ನು ನೋಡಿ ಸುಮಾ ಬೆಚ್ಚಿದಳು. ಅಮೆರಿಕಾದಲ್ಲಿ ಕಾರ್ ಅಪಘಾತದಲ್ಲಿ ಆಕಾಶ್‌ನ ಕಾಲು ಊನವಾಗಿತ್ತು. ಅಲ್ಲದೇ ಮುಖದ ಮೇಲೆ ಕೂಡ ಗಾಯವಾಗಿ ಒಂದೆರಡು ಗೆರೆಗಳು ಮಾಸದೇ ಉಳಿದಿದ್ದವು.

ಸುಮಾ ಹೇಗೋ ಸಾವರಿಸಿಕೊಂಡು ಗೆಳತಿಯ ಕುಟುಂಬವನ್ನು ಎದುರುಗೊಂಡು ಉಪಚರಿಸಿದಳು. ಆಕಾಶ್ ಮತ್ತು ವಿವೇಕ್‌ನನ್ನು ಗೆಸ್ಟ್ ರೂಮಿಗೆ ಕಳಿಸಿ ಅನುವನ್ನು ತನ್ನ ರೂಮಿಗೆ ಕರೆದೊಯ್ದಳು.

ಬೇರೇನಾದರೂ ಮಾತು ಬರುವುದಕ್ಕೆ ಮೊದಲೇ ಅನು ''ನೋಡು ಸುಮಾ ಆಕಾಶ್‌ನ ಅವಸ್ಥೆಯನ್ನು ನೀನು ನೋಡಿದ್ದೀಯಾ. ಈಗೆರಡು ವರ್ಷದ ಹಿಂದೆ ಗೆಳೆಯರೊಡನೆ ಕಾರಿನಲ್ಲಿ ಹೋಗುತ್ತಿದ್ದಾಗ ಆ್ಯಕ್ಸಿಡೆಂಟಾಗಿ ಕಾಲು ಊನವಾಗಿತ್ತು. ಪ್ರಾಣ ಉಳಿದದ್ದೇ ದೊಡ್ಡದು. ಊರಿನಲ್ಲಿ ಯಾರಿಗೂ ಈ ವಿಷಯ ತಿಳಿಸಿರಲಿಲ್ಲ. ಆವಾಗಿನಿಂದ ಆಕಾಶನದು ಒಂದೇ ಹಠ. ಆಕಾಂಕ್ಷಳಿಗೆ ಬೇರೆ ಗಂಡು ನೋಡಲು ಹೇಳು ಎಂದು. ಅವನ ಓದು ಮುಗಿದಿದೆ. ಯಾವುದಾದರೂ ಒಂದು ಒಳ್ಳೆಯ ನೌಕರಿಯೂ ಸಿಗಬಹುದು. ಹೀಗೆಯೇ ಇರುತ್ತೇನೆ. ಮದುವೆಯೇ ಆಗುವುದಿಲ್ಲ ಎನ್ನುತ್ತಾನೆ. ನೀನು ಆಕಾಂಕ್ಷಳಿಗೆ ಬೇರೆ ಗಂಡು ನೋಡಿ ಮದುವೆ ಮಾಡಿಬಿಡು. ಕುಂಟನನ್ನು ಕಟ್ಟಿಕೊಂಡು ಅವಳು ಹೇಗೆ ಬಾಳುವೆ ಮಾಡುತ್ತಾಳೆ? ನೋಡಲು ಚೆನ್ನಾಗಿದ್ದಾಳೆ, ಓದಿದ್ದಾಳೆ ಅವಳಿಗೆ ಒಳ್ಳೆಯ ಲಕ್ಷಣವಾದ ಹುಡುಗ ಸಿಗುತ್ತಾನೆ' ಎಂದಳು.

ಅನೂಳ ಮಾತುಗಳನ್ನು ಕೇಳುತ್ತಾ ಕುಳಿತಿದ್ದ ಸುಮಾಳ ಕಣ್ಣುಗಳಲ್ಲಿ ನೀರಿಳಿಯುತ್ತಿತ್ತು. ಗೆಳತಿಯ ಕೈಗಳನ್ನು ಗಟ್ಟಿಯಾಗಿ ಹಿಡಿದು ''ಇಷ್ಟೇನಾ ನನ್ನನ್ನು ನೀನು ಅರ್ಥಮಾಡಿಕೊಂಡಿದ್ದು? ಆಕಾಶ್‌ನ ಕಾಲು ಊನವಾದ ಮಾತ್ರಕ್ಕೆ ನಾವು ಅವನನ್ನು ತಿರಸ್ಕರಿಸುತ್ತೇವೆ ಎಂದುಕೊಂಡಿದ್ದೀಯಾ? ಒಮ್ಮೆ ಆಕಾಂಕ್ಷಳಿಗೇ ಏನಾದರೂ ಆಗಿದ್ದರೆ ನೀನು ಹೀಗೆಯೇ ವಿಚಾರ ಮಾಡುತ್ತಿದ್ದೆಯಾ? ನೋಡು, ಈಗಾಗಲೇ ನಾನು ಆಕಾಂಕ್ಷಳ ಹತ್ತಿರ ಮಾತನಾಡಿದ್ದೇನೆ. ಅವಳು ಆಕಾಶ್‌ನನ್ನು ಮನಸಾರೆ ಪ್ರೀತಿಸುತ್ತಾಳೆ. ಅವನನ್ನೇ ಮದುವೆಯಾಗುವುದಾಗಿ ಹೇಳಿದ್ದಾಳೆ. ಅವಳ ಪ್ರೀತಿಗೆ ಬೇರೇನೂ ಅಡ್ಡ ಬರಲಾರದು. ಒಂದು ವೇಳೆ ಆಕಾಶ ಹಿಂದು ಮುಂದು ನೋಡಿದರೂ, ಅವಳೇ ಆಕಾಶನನ್ನು ಮದುವೆಗೆ ಒಪ್ಪಿಸುತ್ತಾಳೆ. ಸುಮ್ಮನೆ ನೀನು ಏನೇನೋ ವಿಚಾರ ಮಾಡಬೇಡ'' ಎಂದಳು. ಇಬ್ಬರ ಕಣ್ಣಲ್ಲೂ ಆನಂದಬಾಷ್ಪವಿತ್ತು.

**''ಎಲ್ಲ ಸಂಬಂಧಕ್ಕಿಂತ ಮಿಗಿಲಾದ ಪವಿತ್ರವಾದ ಸಂಬಂಧ ಗೆಳೆತನಕ್ಕೆ ಅರ್ಪಿತ''**

*PAGE DONATED BY : **SMT. RAJESHWARI P. GUNISHASTRI**, GOKARN, PRABHADEVI IN THE MEMORY OF **LATE SHRI P. V. GUNISHASTRI** OUR PAST PRESIDENT OF "HAVYAKA" (DEC.-2010)*

# ಗರತಿ-ಜಾನಪದದ ಮೂಲ ಸೆಲೆ

( ಕಳೆದ ಸಂಚಿಕೆಯಿಂದ )

- ಸುಮಾ ದ್ವಾರಕಾನಾಥ್

ಧನಲೋಭ, ಸ್ವಾರ್ಥ ಬುದ್ಧಿ ಮನುಷ್ಯನನ್ನು ಕಂಗೆಡಿಸುವಂತೆ, ಹರಯವೂ ಅವನ ದೇಹದಲ್ಲಿ ಕಾಲಿರಿಸಿ ಮದವೇರಿಸುವುದುಂಟು. ಪ್ರಾಯದ ಮಬ್ಬಿನಲ್ಲಿರುವ ತರುಣ-ತರುಣಿಯರಿಗೆ ಗರತಿಯ ಸಂದೇಶ ಹೀಗಿದೆ.

**ಹೆಣ್ಣಿಂದ ರಾವಣ ಮಣ್ಣುಗೂಡಿನಯ್ಯ।**
**ಅನ್ನಿಗರ ಹೆಣ್ಣು ಬಯಸದೆ। ನನ ತಮ್ಮ**
**ಹೊಳ್ಳಿ ನೋಡಬೇಡ ಪರ ಹೆಣ್ಣ।**

ಸುಳ್ಳು ಕಳವು ಮಾಡದಂತೆ ತನ್ನ ತಮ್ಮನು ಇನ್ನೊಬ್ಬರ ಹೆಣ್ಣನ್ನು ಹೊರಳಿಯೂ ನೋಡಬಾರದೆಂದು ಗರತಿ ಹೇಳುತ್ತಾಳೆ.

**ಸುಳ್ಳು ಹೇಳಲಿ ಬ್ಯಾಡ। ಕಳವು ಮಾಡಲಿ ಬೇಡ।**
**ಒಳ್ಳೆಯ ಹಾದಿ ಬಿಡಬೇಡ । ನನ್ನ ತಮ್ಮ**
**ಹೊಳ್ಳಿ ನೋಡಬೇಡ ಪರ ಹೆಣ್ಣ।**

ಹೀಗೆ ಇನ್ನೂ ಹಲವಾರು ಬಗೆಯಲ್ಲಿ ಹಾಡಿ ನಾಡಿನ ಜನರ ಎದೆಯ ಕೊಳೆಯನ್ನು ತೊಳೆದು ಹಸನುಗೊಳಿಸಿದ್ದಾಳೆ.

**ವೈಚಾರಿಕತೆ :** ಈ ಜನ ಹೆಚ್ಚಾಗಿ ಪ್ರವೃತ್ತಿ ಮಟ್ಟದಲ್ಲಿ ಬದುಕಿದವರು. ಜೀವನದ ಎಲ್ಲ ಸಮಸ್ಯೆಗೂ ಕರ್ಮ ಮೊದಲಾದ ಎಲ್ಲವನ್ನೂ ಒಳಗೊಳ್ಳುವ ಸಿದ್ಧ ಉತ್ತರಗಳಿಂದಲೇ ತೃಪ್ತರಾದವರು. ಜನಪದ ಕವಿಗಳು ತಮ್ಮ ಸಾಮಾಜಿಕ ವ್ಯವಸ್ಥೆಗೆ ಒಪ್ಪಿತವಾದ ಮೌಲ್ಯಗಳನ್ನು ತಾವೂ ಒಪ್ಪಿಕೊಂಡರು. ವ್ಯಕ್ತಿಗಳ ಸುಖಕ್ಕೆ ಮೌಲ್ಯಗಳು ಅಡ್ಡಿಯಾದಾಗ ಪ್ರತಿಭಟನೆಯ ಧ್ವನಿಗಳು ಕೇಳಿ ಬರುವುದು ಸಾಮಾನ್ಯ ಸಂಗತಿ. ಆದರೆ ಇಲ್ಲಿ ಅಂಥ ಬಂಡಾಯದ ಧ್ವನಿ ಕೇಳಿಬರುವುದೇ ಇಲ್ಲ. ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿರಬಹುದೆಂದು ತೋರುತ್ತದೆ. ಮೊದಲನೆಯದು ಭಾರತೀಯ ಕರ್ಮ ತತ್ವ. ಎರಡನೆಯದು ಮೌಲ್ಯಗಳು ಈ ಜನರ ಪಾಲಿಗೆ ತೀರ ಸರಳಗೊಳಿಸಿದ ನೀತಿಗಳಾಗಿದ್ದವು. ಮೂರನೆಯ ಕಾರಣ ಜನಪದ ಕವಿ ಬದುಕಿದ ಸಮಾಜ ಸಮಷ್ಟಿ ಪ್ರಜ್ಞೆ ಹೆಚ್ಚು ಜೀವಂತವಾಗಿದ್ದ ಕಾಲ. ಅಂದರೆ ಮೌಲ್ಯ ವಿವೇಚನೆಯ ದೃಷ್ಟಿಕೋನ ವ್ಯಕ್ತಿಯತ್ತ ಅಲ್ಲ, ಸಮಾಜದತ್ತ ಅಭಿಮುಖವಾಗಿರುವುದನ್ನು ಪ್ರಸಿದ್ಧ ಕವನ 'ಕೆರೆಗೆ ಹಾರ' ದಲ್ಲಿಕಾಣಬಹುದು.

**ಕಲ್ಲನ ಕೇರಿ ಮಲ್ಲನ ಗೌಡ ಕೆರೆಯೊಂದ ಕಟ್ಟಿಸ್ಯಾನ।**
**ಕೆರೆಯೊಂದ ಕಟ್ಟಿಸ್ಯಾನ । ಸೆರೆಮುಕ್ಕ ನೀರಿಲ್ಲ।**
**ಸೆರೆಮುಕ್ಕ ನೀರಿಲ್ಲ । ಹೊತ್ತಿಗೆ ತೆಗೆಸ್ಯಾರು ।**
**ಹೊತ್ತಿಗೆ ತೆಗಸ್ಯಾರು । ಜೋಯಿಸ ಕೇಳ್ಯಾರು।**
**ದೇವ್ರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ ।**
**ಹಿರಿ ಸೊಸಿ ಮಲ್ಲವ್ವನ ಹಾರವ ಕೊಡಬೇಕು ।**
**ಹಾರವ ಕೊಟ್ಟರೆ ನೀರು ಬೀಳೂವಂದ್ರು।**

ಇದರ ಇಡೀ ಕಥೆಯ ದುರಂತವೇ ಒಂದು ಮೂಢ ನಂಬಿಕೆಯ ಮೇಲೆ ನಿಂತಿದೆ. ಹೊಸದಾಗಿ ಕಟ್ಟಿಸಿದ ಕೆರೆಗೆ ನೀರು ಬಾರದಿದ್ದರೆ ಜ್ಯೋತಿಷ್ಯ ಕೇಳುವುದು, ಅದಕ್ಕೆ ಪರಿಹಾರವಾಗಿ ಮನೆಯ ಸೊಸೆಯನ್ನು ಹಾರವಾಗಿ ಕೊಡಬೇಕೆನ್ನುವುದು ಈಗ ನಮಗೆ ಅರ್ಥವಿಲ್ಲದಾಗಿ ಕಾಣುವ ಅಮಾನುಷ ಸಂಪ್ರದಾಯ, ಭಾಗೀರಥಿ ತನ್ನೆಲ್ಲ ಸಂಕಟವನ್ನು ನುಂಗಿಕೊಂಡು ಹಾರವಾದದ್ದು ಸಂಯಮದ ಶಿಖರವೇ ಸರಿ. ಆದರೂ ಕೊನೆಯಲ್ಲಿ ಭಾಗೀರಥಿ ಮಾದೇವರಾಯನ ವೈಯಕ್ತಿಕ ದುಃಖದ ತೀವ್ರತೆಗಿಂತ ಕೆರೆಗೆ ನೀರು ಬಂದ ಸಾಮಾಜಿಕ ಪರಿಣಾಮವೇ ಮುಖ್ಯವಾಗುತ್ತದೆ.

ಗರತಿಯ ಜೀವನ ಹೆಜ್ಜೆ ಹೆಜ್ಜೆಗೂ ದುಃಖ, ನೋವು ಸಂಕಟಗಳ ಬಿರುಗಾಳಿ. ಇಂತಹ ಸಂದರ್ಭದಲ್ಲಿ ಜೀವನದಿಂದ ಮುಕ್ತಳಾಗಲು ಬಯಸುತ್ತಾಳೆ. ಸಾವಿನಲ್ಲಿ ತನ್ನನ್ನು ಎಲ್ಲರೂ ಹೊಗಳುವಂತಾಗಬೇಕೆಂದೂ, ತನ್ನ ಅಂತ್ಯ ಯಾತ್ರೆಗೆ ಜನ ಕಿಕ್ಕಿರಿದು ಬರುವಂತಾಗಬೇಕೆಂದು ಅವಳ ಹಿರಿಯಾಸೆ. ಇಹ ಲೋಕದ ಯಾತ್ರೆ ಮುಗಿಯಿತು, ನಡೆ ಇನ್ನು ಎಂದು ಕರೆಯುವ ಕರಾಳ ಯಮರಾಯನನ್ನೂ ಇವಳು ಅತಿಥಿಯಂತೆ ಸತ್ಕರಿಸಿ ಬಾಳಿನ ಆಸೆಯನ್ನು ಶಾಂತಿ ಸಮಾಧಾನಗಳಿಂದ ಎದುರಿಸಿದ ಧೀರೆ ಈಕೆ.

**ಎಂದೂ ಬಾರದ ನೀವು ಇಂದೇಕೆ ಬಂದಿರಿ?**
**ಕೊಳ್ಳಯ್ಯ ನೀರ ಕುಡಿನೀರ। ಜವರಾಯ**
**ಕೊಳ್ಳಯ್ಯ ನೀರ ಕುಡಿ ನೀರ।**

ಒಟ್ಟಿನಲ್ಲಿ ಇದೊಂದು ಜೀವನವೇ ಕಾವ್ಯವಾದ ಜನಪದ ಸಾಹಿತ್ಯದ ಇಣುಕು ನೋಟ. ವಿಶೇಷವಾಗಿ ಕಥಾ ವಸ್ತುವಿಲ್ಲದಿದ್ದರೂ ನಾಯಕ ನಾಯಕಿಯರಿಲ್ಲದಿದ್ದರೂ ಇದೊಂದು ದರ್ಶನೀಯ ಸಾಹಿತ್ಯವಾಗಿದೆ. ನಮ್ಮ ನಾಡಿನ ಬಡತನದ ಬಾಳಿನ ಗೋಳಿನಲ್ಲಿಯೂ ನಮ್ಮ ತಾಯಂದಿರು, ಅಕ್ಕ ತಂಗಿಯರು, ತಮ್ಮ ಹೃದಯದಲ್ಲಿ ತುಂಬಿಕೊಂಡಿದ್ದ ಸೌಜನ್ಯ, ಸರಳತೆ, ಬಂಧು ಪ್ರೇಮ, ನೀತಿ ಸಮಾಧಾನ ಮುಂತಾದ ಜೀವನ ಮೌಲ್ಯಗಳನ್ನು ಕಂಡಾಗ, ನಮಗೆ ನಿಜವಾಗಿಯೂ ಹೆಮ್ಮೆಯೆನಿಸುವುದು. ಜನಪದ ಸಾಹಿತ್ಯದಲ್ಲಿ ನಮ್ಮ ಸಂಸ್ಕೃತಿಯೇ ಅಡಕವಾಗಿರುವುದರಿಂದ ಇದರ ಸಂಸ್ಕಾರವು ನಮ್ಮ ಜನತೆಗೆ ಅತ್ಯಾವಶ್ಯಕವಾಗಿದೆ. ಇದನ್ನು ರಕ್ಷಿಸಿ ನಮ್ಮದೇ ಆದ ಭಂಡಾರವನ್ನು ಇತರರಿಗೆ ತೋರಿಸಿ ನಾವೆಲ್ಲ ಅಭಿಮಾನ ಪಡುವಂತಾಗಬೇಕು. ●

## ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ



**ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು ಸೋಂದಾ, ಸ್ವರ್ಣವಲ್ಲೀ ಮಠ ಇವರ ವ್ಯಾಸಪೂಜಾ ಮತ್ತು ಚಾತುರ್ಮಾಸ ವ್ರತವನ್ನು ಜುಲೈ 25, 2010 ರಂದು ಸ್ವರ್ಣವಲ್ಲಿ ಮಠದಲ್ಲಿ ನಡೆಸಲಾಗುವುದು. ಈ ಕಾರ್ಯಕ್ರಮದಲ್ಲಿ ಸರ್ವ ಶಿಷ್ಯ ವೃಂದವೂ ಪಾಲ್ಗೊಂಡು ಶ್ರೀಗಳ ಆಶೀರ್ವಾದಕ್ಕೆ ಪಾತ್ರರಾಗಬೇಕಾಗಿ ವಿನಂತಿ.**

**ಶ್ರೀಗಳ ಚಾತುರ್ಮಾಸಾವಧಿಯಲ್ಲಿ ಮುಂಬಯಿ ಸೀಮಾ ವತಿಯಿಂದ ಸೆಪ್ಟೆಂಬರ್ 20, 2010ರಂದು ನಡೆಯಲಿರುವ ಭಿಕ್ಷಾ ಸೇವೆಯಲ್ಲಿ ಪಾಲ್ಗೊಂಡು ಶ್ರೀಗಳ ಕೃಪೆಗೆ ಪಾತ್ರರಾಗೋಣ.**

**ಶ್ರೀ ಆರ್. ಜಿ. ಭಟ್**
**ಕಾರ್ಯದರ್ಶಿ**
**ಸ್ವರ್ಣವಲ್ಲಿ ಸೇವಾ ಸಮಿತಿ, ಮುಂಬಯಿ**

*PAGE DONATED BY : **SHRI V. G. BHAT, NIGDI** (DEC.-2010)*

# HINDU RITUALS AND ROUTINES
## WHY DO WE FOLLOW THEM?

**22. WHY DO WE DO AARATI?**

Towards the end of every ritualistic worship (pooja or bhajan) of the Lord or to welcome an honored guest or saint, we perform the aarati. This is always accompanied by the ringing of the bell and sometimes by singing, playing of musical instruments and clapping.

It is one of the sixteen steps (shodasha upachaara) of the pooja ritual. It is referred to as the lighted lamp in the right hand, which we wave in a clockwise circling movement to light the entire form of the Lord.

Each part is revealed individually and also the entire form of the Lord. As the light is waved we either do mental or loud chanting of prayers or simply behold the beautiful form of the Lord, illuminated by the lamp. At the end of the aarati we place our hands over the flame and then gently touch our eyes and the top of the head.

We have seen and participated in this ritual from our childhood. Let us find out why we do the aarati?

Having worshipped the Lord of love - performing abhisheka, decorating the image and offering fruits and delicacies, we see the beauty of the Lord in all His glory. Our minds are focused on each limb of the Lord as the lamp lights it up. It is akin to silent open-eyed meditation on His beauty. The singing, clapping, ringing of the bell etc. denote the joy and auspiciousness, which accompanies the vision of the Lord.

Aarati is often performed with camphor. This is of spiritual significance. Camphor when lit, burns itself out completely without leaving a trace of it. It represents our inherent tendencies (vaasanas). When lit by the fire of knowledge which illuminates the Lord (Truth), our vaasanas thereafter burn themselves completely, not leaving a trace of ego which creates in us a sense of individuality that keeps us separate from the Lord.

Also while camphor burns to reveal the glory of Lord, it emits a pleasant perfume even while it sacrifices itself. In our spiritual progress, even as we serve the guru and society, we should willingly sacrifice ourselves and all we have, to spread the "perfume" of love to all. We often wait a long while to see the illuminated Lord but when the aarati is actually performed, our eyes close automatically as if to look within. This is to signify that each of us is a temple of the Lord.

Just as the priest reveals the form of the Lord clearly with the aarati flame, so too the guru reveals to us the divinity within each of us with the help of the "flame" of knowledge (or the light of spiritual knowledge). At the end of the aarati, we place our hands over the flame and then touch our eyes and the top of the head. It means - may the light that illuminated the Lord light up my vision; may my vision be divine and my thoughts be noble and beautiful.

The philosophical meaning of aarati extends further. The sun, moon, stars, lightning and fire are the natural sources of light. The Lord is the source of this wonderful phenomenon of the universe. It is due to Him alone that all else exist and shine. As we light up the Lord with the flame of the aarati, we turn our attention to the very source of light, which symbolizes knowledge and life.

Also the sun is the presiding deity of the intellect, the moon, that of the mind, and fire, that of speech. The Lord is the supreme consciousness that illuminates all of them. Without Him, the intellect cannot think, nor can the mind feel nor the tongue speak. The Lord is beyond the mind, intellect and speech. How can this finite equipment illuminate the Lord? Therefore, as we perform the aarati we chant;

**Na tatra surya bhaati na chandra taarakam**
**Nemaa vidyuto bhaanti kutoyamagnib**
**Tameva bhaantam anubhaati sarvam**
**Tasya bhasa sarvam idam vibhaati**

**He is there where the sun does not shine,**
**Nor the moon, stars and lightning.**
**then what to talk of this small flame (in my hand),**
**Everything (in the universe) shines only after the Lord,**
**And by His light alone are we all illuminated.**

Swami Chinmayananda

***Courtesy : Chinmaya Mission***

*With best compliment from :*

**Advocate**
**SHRI M. S. PANDIT**
**PUNE**

# YATRA TO DEHU

**- Smt. Jayashri Bhagwat, Mulund**

### Sant Tukaram

On a sunny March morning my husband & I along with his friends Sanjit & Bhaktiamma (she wanted to offer a Shawl at the Samadhi of Sant Jnaneshwar) started our yatra. It was the auspicious day of Ganesh Sankashtha Chaturthi as well as the birth anniversary of Chhatrapati Shivaji Maharaj. Such outings always make us hungry! So after the customary halt at the Food Court & satiated by the piping hot ginger tea & yummy Vada Pav we continued our journey on the Xpressway. We exited at Dehu Road & joined the old Pune/ Mumbai highway. A short while later, at the entrance of the Dehu military Cantonment we entered a high arch on which was inscribed that this was the entrance to the sacred town of Dehu. Passing through the beautifully maintained Cantonment we reached Dehu, spread out along the banks of the holy river Indrayani.

### Indrayani river at Dehu

The banks of the river are bright, lush and green. Behind it is the Bhandara Hill covered with trees, where Tukaram used to go to write his abhangs. Dehu is considered a blessed place for it was here that Sant Tukaram was born and Lord Vithala Himself is believed to reside there.

The whole town had a festive air with crowds of villagers milling at the main bus stand. Just the day before the town had celebrated the anniversary of Sant Tukaram's heavenly ascent in a Pushpaka Vimana.

We decided to first visit the Bhandara Hill. A short drive up the hill & we parked in the shade of the Temple wall as it was 11 am & already hot. In the cool of a pandal sat around 500 local devotees engrossed in the Hari Katha. Intermittently there were joyous cries of "Vithal, Vithal Panduranga Vithal"….the chorus was infectious & we too joined the singing!

Here, Sant Tukaram studied the Scriptures and the religious compositions of Namdev and Kabir in an atmosphere of complete solitude. Tukaram was very fond of this atmosphere of solitude, for it offered him a whole new range of near and dear ones in the form of trees, creepers and birds, who inspired his famous abhang: Vrikshavalli amha soyare vanachare….

Reluctantly we left the gathering to pay obeisance at the main Mandir. A little away is the Jijai Mandir dedicated to his wife. It has a beautiful altar of Lord Vithal & Jijai with a bleeding foot.

### I am sure many of you know this story….

Sant Tukaram would get up early in the morning, offer prayers to Vithoba- Rakhumai, the family deity, and set out for Bhandara Hill. His wife, Jijai, would take his lunch to the Bhandara Hill after finishing all her domestic chores in the morning. One hot sunny day, about noon, as she was carrying the lunch uphill a large thorn pricked her foot & she fell down & cried for help. There was nobody to help her. Lord Vithala took pity on her plight & assumed a human form of a young boy chopping wood nearby. He ran to her rescue, removed the thorn, bandaged her foot with a piece of cloth & helped her to climb up the mountain carrying the lunch. As they neared the top he said he had to get back to his work & disappeared. She narrated the events to Sant Tukaram. He was overjoyed as he immediately understood that it was none other than Lord Vithala himself who had helped his wife. With tears in his eyes he acknowledged the love & tenderness of His Lord Vithala.

We stood silently at the very spot the Lord had appeared & wondered at the miracle. Then we once again returned to the town & made our way through the crowds to the Gatha Mandir.

In celebration here too in the open field at the foot of the Temple there was a large shamiana. It was past noon and hundreds of villagers were resting awaiting the start of the Hari Kirtan. The backdrop to the dias had huge banners beautifully depicting the following story…..…

The popularity of Sant Tukaram's simple discourses & his devotional compositions in the local language had enraged the Brahmin Pandits. They branded his Abhangs as against the Vedas & Holy Scriptures & ordered him to throw them into the Indrayani. With a heavy heart Sant Tukaram obeyed the Pandits order. He wrapped his writings in a cloth & weighing down with a stone he gently immersed the bundles in the river. His life's offering, devotion to the Lord was destroyed. He had no will to live & refused to partake food & water. He continuously sang the name of the Lord. A large crowd of his devotees gathered around him & watched with apprehension. It was on the 13th day that the Miracle happened, the Lord came in a child's garb on the thirteenth night and told him that He had safeguarded his writings underwater for thirteen days and that these would re-surface the very next day. Some of the devout at Dehu also received similar divine messages and accordingly, went to the bank of the Indrayani the next day. Lo and behold! Before the astounded gaze of all gathered there all the bundles of verses were seen floating on the water surface & glided to the shore! There were cries of Joy and Wonder as all the books were completely untouched by water!

**Abhangs at Gatha Mandir Page of original manuscript from Tukaram's abhangs**

### Gatha Mandir - Front Gatha Mandir on the Indrayani

The Gatha Mandir commemorates this Miracle. The foundation of the temple was laid in November 1995 & construction began in 1996. The main temple is a three-storey building. At the ground level, incidents from the life of Sant Tukaram are depicted, while the first floor contains a five feet idol of Sant Tukaram, made from five different metals. In addition, on the second floor, idols of Lord Vithala and goddess Rukmini are kept at such an angle that they can be seen even from the ground floor. On the walls of all three floors, more than 4100 Abhangs from the Abhanga-Gatha have been written on white marble grouped under various topics : -Balkrishna, Love,

*continued on page 11*

*PAGE DONATED BY : **SHRI N. R. HEGDE, DOMBIVLI** (DEC.-2010)*

# ಸಂಕ್ಷಿಪ್ತ ಸುದ್ದಿಗಳು

## ಮುಂಬಯಿಯಲ್ಲಿ ಯಕ್ಷೋತ್ಸವ



ಕನ್ನಡ ಕಲಾಕ್ಷೇತ್ರ ಮುಂಬಯಿ ಹಾಗೂ ಉಡುಪಿ ಕೇಂದ್ರದ ಕಲಾವಿದರ ಸಹಭಾಗಿತ್ವದಲ್ಲಿ ತಾ. 11 ಜೂನ್‌ರಿಂದ 15 ಜೂನ್‌ರ ವರೆಗೆ ನಡೆದ ಯಕ್ಷೋತ್ಸವವು ಕಲಾಪ್ರೇಮಿಗಳಿಗೆ ರಸದೌತಣವನ್ನು ನೀಡಿತು. 5 ದಿನಗಳ ವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಪ್ರತಿ ದಿನವೂ ಮುಂಬಯಿಯ ಕಲಾಕ್ಷೇತ್ರದ ಹವ್ಯಾಸಿ ಕಲಾವಿದರು ಹಾಗೂ ಉಡುಪಿ ಕೇಂದ್ರದ ನುರಿತ ಕಲಾವಿದರಿಂದ ಎರಡು ಪ್ರಸಂಗಗಳು ಜರಗಿದ್ದವು. ಕಿಕ್ಕಿರಿದ ಸಭಾಗೃಹದಲ್ಲಿ ನಡೆದ ಯಕ್ಷೋತ್ಸವವು ಯಕ್ಷಗಾನ ಪ್ರೇಮಿಗಳ ಮನಸ್ಸನ್ನು ಸೂರೆಗೊಂಡಿತು.

ಹವ್ಯಕ ವೆಲ್ಫೇರ್ ಟ್ರಸ್ಟಿನ ಆಡಳಿತ ಮಂಡಳಿಯ ಸದಸ್ಯರಾದ ಸತೀಷ್‌ಕುಮಾರ್ ಕೆ. ಸಿ. ಈ ಕಾರ್ಯಕ್ರಮವನ್ನು ಆಯೋಜಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರಲ್ಲದೇ 'ಜಾಂಬವತಿ ಕಲ್ಯಾಣ'ದಲ್ಲಿ ಬಲರಾಮನಾಗಿ, 'ಪಂಚವಟಿ' ಪ್ರಸಂಗದಲ್ಲಿ ಶೂರ್ಪನಖಿಯಾಗಿ, 'ವೀರಮಣಿ ಕಾಳಗ'ಪ್ರಸಂಗದಲ್ಲಿ ಶತ್ರುಘ್ನನಾಗಿ ಮನೋಜ್ಞ ಅಭಿನಯವನ್ನು ನೀಡಿದರು.

## ಡಾ. ಜಿ.ಎನ್. ಉಪಾಧ್ಯ ಅವರ ಕೃತಿಗೆ ಕಸಾಪ ಪ್ರಶಸ್ತಿ



ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ| ಜಿ. ಎನ್. ಉಪಾಧ್ಯ ಅವರಿಂದ ರಚಿಸಲ್ಪಟ್ಟ ಮಹಾರಾಷ್ಟ್ರ-ಕರ್ನಾಟಕ ಆದಾನ-ಪ್ರದಾನ ಕೃತಿಗೆ ಗದ್ಯ ವಿಭಾಗದಲ್ಲಿ ಸಾಹಿತ್ಯ ಪರಿಷತ್‌ನ ರತ್ನಾಕರ ವರ್ಣಿ ಮುದ್ದಣ ಅನಾಮಿಕ ದತ್ತಿ ಪ್ರಶಸ್ತಿ ದೊರೆತಿದೆ.

ಕಳೆದ ವರ್ಷ ಡಾ. ಜಿ. ಎನ್. ಉಪಾಧ್ಯ ಅವರ ಕೃತಿಗೆ ಸಾಹಿತ್ಯ ಪರಿಷತ್ತ್‌ನ ಪ್ರತಿಷ್ಠಿತ ಶಾಂತಿಲಾಲ್ ಪ್ರಶಸ್ತಿ ಲಭಿಸಿದ್ದನ್ನು ಸ್ಮರಿಸಬಹುದು. ಉಪಾಧ್ಯಾಯರಿಗೆ ಹಾರ್ದಿಕ ಅಭಿನಂದನೆಗಳು.

## Achievement



**Master Vinit Anil Bhat** (son of Mrs. Sneha and Anil Timman Bhat, Bandra East, (grandson of Smt. Girija and Ex-President of H.W.T. Shri T. S. Bhat) has secured 96% in 10th Std. ICSE examinations held in March 2010. He is the proud student of VCW Arya Vidya Mandir, Bandra.

Vinit has been a school topper since his childhood and used to participate with Jeal in Inter House and Inter School debating competitions. He is also a voracious reader. We congratulate him and wish him all the success.

## Sad Demise



**Shri Ashok P. Gunishastri**, second s/o. Smt. Rajeshwari and Ex-President of H.W.T. Late Shri P.V. Gunishastri, working in A.C.C. passed away on 4th June 2010 after a brief illness. He is survived by his mother, Smt. Rajeshwari, wife Smt. Mangala and son Chinmay. We pray for the eternal peace of the departed soul.

## ದುಃಖದ ನಿಧನ



ಹೊನ್ನಾವರ ತಾಲೂಕಿನ ಕರ್ಕಿಯಲ್ಲಿ ಜನಿಸಿದ ಶ್ರೀ **ಗಜಾನನ ಶಂಕರ ಅವಧಾನಿಯವರು** ತಾ. 21.05.2010ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರಿಗೆ 73 ವರ್ಷವಾಗಿತ್ತು. ಅಕಸ್ಮಾತ್ ಕಂಡು ಬಂದ ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ ಫಲಕಾರಿಯಾಗದೇ ಅವರು ಕೊನೆಯುಸಿರೆಳೆದರು.

ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಂ.ಕಾಮ್ ಮುಗಿಸಿ ಐದು ದಶಕಗಳಿಂದ ಮುಂಬಯಿಯಲ್ಲಿ ನೆಲೆಸಿದ ಅವರು ಹವ್ಯಕ ವೆಲ್ಫೇರ್ ಟ್ರಸ್ಟಿಗೂ ತಮ್ಮ ಸೇವೆ ಸಲ್ಲಿಸಿದ್ದರು. ಅವರು ತಮ್ಮ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ. ●

## ಚುಟುಕುಗಳು

**ವ್ಯಥೆ**

ಹಣ್ಣೆಲೆ ನೋಡಿ
ಚಿಗುರೆಲೆ ನಗುವದು
ನಮ್ಮ ನಿತ್ಯ ಜೀವನದ ಕತೆಯು
ಮರಿ ಕವಿ ನೋಡಿ
ಹಿರಿ ಕವಿ ನಗುವುದೇ
ನಮ್ಮ ಕಾವ್ಯ ಪ್ರಪಂಚದ ವ್ಯಥೆಯು

**ಮನ**

ಮನವೆಂಬುದು ಹೂವಿನ ಮೊಗ್ಗೆಯಂತೆ
ಅರಳಿದರೇ ಅದು ಚೆಂದ
ಮನವೆಂಬುದು ಮಡ್ಚಿದ ಕೊಡೆಯಂತೆ
ಬಿಚ್ಚಿದರೆ ನೆರಳದರಿಂದ
ಅರಳಿದ ಮನವು ಸದ್ವಿಚಾರವು
ಈ ಬಾಳಿಗೆ ನೀಡಿದೆ ಅರ್ಥ

**ಗಡಿ**

ಅದು ನಿಮ್ಮದು ಇದು ನಮ್ಮದು
ಯಾಕಿದು? ಗಡಿ ಬಡಿದಾಟ
ಅದು ಅವನದು ಇದು ಅವನದು
ಯಾಕಿದು? ನಮ್ಮಲ್ಲಿಯೆ ಕಚ್ಚಾಟ

**ನನ್ನವಳಿಗೆ**

ನೀ ಬಂದ ದಿನದಿಂದ
ನನ್ನ ಮನದಂಗಳದಿ
ನಿತ್ಯ ಬೆಳದಿಂಗಳು
ಅನುಭವಿಸಿಲ್ಲ ನಾ
ಅಮವಾಸ್ಯೆಯ
ರಾತ್ರಿಯನು ಎಂದೂ

**ಡಾ. ರಘುವೀರ ಭಟ್**

*PAGE DONATED BY : **SHRI S. M. HEGDE, SANTACRUZ***

*continued from page 9*

Bhakti, Blessings…..As you look up the central high dome you can see huge murals painted, depicting stories from the Dashavatar lining the inner domes of the ceiling.. At the entrance you have an elderly villager playing the Ektara 24 x 7 & the devotees bending & touching his feet for Blessings….a modern day Sant Tukaram?

We descended the steps of the Temple & walked down to the river where the Gathas had surfaced & paid homage to Sant Tukaram's immense faith in the Lord Vithala.

**Vithoba-Rakhumai**

Finally we visited the temple on the bank of the river Indrayani. This temple was renovated by Sant Tukaram. Lord Vithala stands here with his hands resting on his waist. Rakhumai (Rukmini) stands to His left. Just opposite stands the Holy Fig Tree, Garuda (the eagle), the Lord's vehicle, stands with his hands folded. At the entrance is Lord Vighnaraj (Swayambu Ganesha). Just outside are Lord Bhairav (Shiva) and Lord Hanuman. To the south is the temple of Lord Hareshwar.

A group of village ladies sit around on the edge of the square, cleaning grain, and they hardly look up as we descend on the little square. Pilgrims are scattered around - some sitting with closed eyes around the tree, others filing through the temple and the house, others walking down to the river. The square and the people in it look as they must have looked in Tukaram's time-the men in red and orange turbans, like the men in the paintings one sees of scenes from Tukaram's life, and the women in the gold-bordered Maharashtrian saris. One of the village ladies begins reciting the stories from Tukaram's life.

Nearby is the house where Tukaram lived. We walk through the house-two small rooms containing his statues and of his wife Jijabai. His sandals are kept placed casually under a small altar, sprinkled with kumkum and flowers. This casual feeling is characteristic of the whole scene in this village. In the central square, opposite the tiny shrine with Tukaram's statue in it, women are decorating a tree with flowers and kumkum, sprinkling water and reciting mantras, as if this ritual were simply a part of their daily work.

Outside is the tree under which he was sitting when an aerial chariot came from Vaikuntha to take him away, thus ending his time on earth. Tukaram sensed his end was nearing. He asked his wife whether she could accompany him on the last journey. "How can I leave behind the children, family, cattle and calves and come with you?" she retorted. Tukaram then went to the bank of the Indrayani along with all and began a keertan there under the shed of a tree & bodily disappeared while reciting the name of the Lord. All the people were engulfed in great grief with the disappearance of Tukaram. His children, brother and disciples stayed put at the place. On the fifth day Tukaram's cymbals, letter and papers descended down from sky. They were now sure that Tukaram had bodily attained Vaikunth.

Standing there in the courtyard amidst the devotees, it was clear that Sant Tukaram belonged to these villagers, that he is a part of their lives. As we left Dehu, I sincerely prayed that Sant Tukaram would shower his Grace on us. ●


**SUVITEK INTERNATIONAL**

**Authorised Dealers for :**
**ARMSTRONG, INTERARCH, CRIL**

- ★ PRE-ENGINEERED BUILDINGS
- ★ ROOFINGS
- ★ WALL CLADDINGS
- ★ THERMAL INSULATIONS
- ★ FALSE CEILINGS
- ★ FALSE FLOORINGS
- ★ BLINDS
- ★ SIGNAGES

◆

5/98, Jayvijay Society, Sahar Road,
Mumbai-400 099 India
Tel. : 2834 2952 ● Fax : 2824 8794
E-mail : suvitek@gmail.com44

*ADVT.*





*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

'Havyaka Sandesha', July 2010

*RNI NO. MAHBIL / 2000 / 746,*
*Postal R.NO. L / TECH - 47 / 989 / MBI / 2009 - 11*

| WPP Licence No. MR/Tech WPP - 188 / North / 09-11 Posted at Mumbai Patrika Channel Stg. Office Mumbai-400 001. | Date of Posting : 27, 28th of every previous month |
|---|---|

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

# ESSAY FROM A CHILD

A teacher from Primary School asks her students to write a essay about what they would like God to do for them...At the end of the day while marking the essays, she read one that made her very emotional. Her husband, that had just walked in saw her crying and asked her:-

What happened?

She answered-

Read this. It's one of my students essays

Oh God, tonight I ask you something very special: Make me into a television. I want to take its place. Live like the TV in my house. Have my own special place, And have my family around ME. To be taken seriously when I talk.... I want to be the centre of attention and be heard without interruptions or questions. I want to receive the same special care that the TV receives when it is not working. Have the company of my dad when he arrives home from work, even when he is tired. And I want my mom to want me when she is sad and upset, instead of ignoring me... And... I want my brothers to fight to be with me... I want to feel that family just leaves everything aside, every now and then, just to spend some time with me. And last but not least make it that I can make them all happy and entertain them...

Lord I don't ask you for much... I just want to live like every TV

At that moment the husband said: - 'My God, poor kid. What horrible parents!

She looked up at him and said: - 'That essay is our son's!

**(From Internet, contributed by Shri R. N. Kameshwar)**

## ಪ್ರಾರ್ಥನೆ

**– ಡಾ. ರಘುವೀರ ಭಟ್**

ತಿಂದೇನಿ ನಾನು,
ಕುಡದೇನಿ ನಾನು,
ಕುಣದೇನಿ ನಾನು ಹುಚ್ಚೆದ್ದು
ಸಂಗಾಟದಾಗ ಬಿದ್ದು

ನಲಿದೇನಿ ನಾನು,
ಸವಿದೇನಿ ನಾನು
ಸ್ವರ್ಗದ ಸುಖವನಿಂದು,
ಸಂಸಾರದಾಗ ಬಿದ್ದು.

ಸಂದ್ಯಾಗ ನಾನು,
ಗೊಂದ್ಯಾಗ ನಾನು,
ಮುಂದ್ಯಾಗ ನಾಲ್ಕು ಬೆರತೇನಿ
ಮನಿ ಮಂದ್ಯಾಗ ಮೈಯ ಮರತೇನಿ

ಮಾಡಿಲ್ಲ ಪಾಪ,
ನೀಡಿಲ್ಲ ತಾಪ
ಬೇಡಯ್ಯ ಶಿವನೆ ಪಾಪ,
ತೋರಯ್ಯ ನಿನ್ನ ರೂಪ

ಸೊರಗಿಲ್ಲ ನಾನು
ಕೊರಗಿಲ್ಲ ನಾನು,
ಒರಗೇನಿ ಸುಖವನುಂಡು,
ಸಂತಾನ ಸುಖದಿ ಮಿಂದು.

ಮನಿ ಗೂಡಿನ್ಯಾಗ,
ಮರಿ ಹಕ್ಕಿಯಾಗ,
ಮೂಡ್ಯಾವ ಈಗ ರೆಕ್ಕಿ,
ತಡಿ! ಹಾರಲಿ ರೆಕ್ಕಿ ಸೊಕ್ಕಿ.

ಮರಿ ಹಾರಿದಾಗ,
ನಿನ್ ಶರಣದಾಗ,
ಬರತೇನಿ ಭಕ್ತಿಯಲ್ಲಿ,
ನನ್ ಮುಕ್ತಿ ನಿನ್ ಪಾದದಲ್ಲಿ

*PAGE DONATED BY : **SHRI VIVEK BHAGWAT,** MULUND (DEC.-2010)*